**(ದಿನಾಂಕ 15.10.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**
**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಪಿ.ಜೆ. ಜಿ. ವಕೀಲರಿಂದಃ-**

ಮಠದ ಕೊಟ್ರಪ್ಪಯ್ಯನಿಗೆ ಇಬ್ಬರು ಹೆಣ್ಣು ಮಕ್ಕಳು ಅವರೆಂದರೆ ಚನ್ನವೀರಮ್ಮ ಮತ್ತು ಸೌಭಾಗ್ಯಮ್ಮ. ಕೊಟ್ರಪ್ಪಯ್ಯನಿಗೆ ಐದು ಜನ ಸಹೋದರರಿದ್ದರು ಅವರೆಂದರೆ ಚನ್ನಬಸಯ್ಯ, ಹಂಪಯ್ಯ, ಚನ್ನವೀರಸ್ವಾಮಿ, ಗುರುಸಿದ್ದಯ್ಯ, ಕೊಟ್ರಪ್ಪಯ್ಯ. ಚನ್ನವೀರಯ್ಯ ಅರಸಿಕೇರೆ ಕೋಲಶಾಂತೇಶ್ವರ ಮಠದ ಪಟ್ಟಾಧಿಕಾರಿಯಾಗಿದ್ದರು. ಅವರು ಅವಿವಾಹಿತರಾಗಿದ್ದರು. ಸನ್ಯಾಸಿಯಾಗಿದ್ದರು. ಗುರುಸಿದ್ದಯ್ಯನಿಗೆ ಮಕ್ಕಳಾಗಲಿಲ್ಲ. ಚನ್ನಬಸಯ್ಯನಿಗೆ ಒಂದು ಗಂಡು ಎರಡು ಹೆಣ್ಣು ಮಕ್ಕಳು ಅವರೆಂದರೆ ಅಜ್ಜಯ್ಯ, ಅನ್ನಪೂರ್ಣಮ್ಮ, ವಿರುಪಾಕ್ಷಮ್ಮ. ಹಂಪಯ್ಯನಿಗೆ ಒಂದು ಗಂಡು ಒಂದು ಹೆಣ್ಣು ಅವರೆಂದರೆ ವೀರಯ್ಯ ಮತ್ತು ಗುರುಬಸಮ್ಮ. ಕೊಟ್ರಪ್ಪಯ್ಯನಿಗೆ ಚನ್ನವೀರಮ್ಮ ಮತ್ತು ಸೌಭಾಗ್ಯಮ್ಮ ಇಬ್ಬರು ಹೆಣ್ಣುಮಕ್ಕಳು.

ಮಠದ ಕೊಟ್ರಪ್ಪಯ್ಯ ಮತ್ತು ಆತನ ಅಣ್ಣ-ತಮ್ಮಂದಿರ ಕುಟುಂಬಕ್ಕೆ ಒಟ್ಟು ಎಷ್ಟು ಆಸ್ತಿಗಳು ಇತ್ತು ಎಂದರೆ ಸಂಪೂರ್ಣ ಮಾಹಿತಿ ಇರುವುದಿಲ್ಲ. ಸದರಿ ಕುಟುಂಬದಲ್ಲಿ ಯಾವಾಗ ಪಾಲು ವಿಭಾಗ ಆಯಿತು ಎಂದರೆ 1982 ನೇ ಇಸವಿಯಲ್ಲಿ ಪಾಲು ವಿಭಾಗ ಆಗಿರುತ್ತದೆ. ಪಾಲುವಿಭಾಗದ ದಾಖಲೆ ನೋಡಿದ್ದೇನೆ. ಮಠದ ಕೊಟ್ರಪ್ಪಯ್ಯ ಮತ್ತು ಆತನ ಅಣ್ಣ-ತಮ್ಮಂದಿರ ನಡುವೆ ಆದ ಪಾಲುವಿಭಾಗ ಪತ್ರವನ್ನು ನೋಡಿದ್ದರೆ ಸದರಿ ಕುಟುಂಬಕ್ಕೆ ಎಷ್ಟು ಆಸ್ತಿಗಳು ಇತ್ತು ಎಂದು ಗೊತ್ತಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮಠದ ಕೊಟ್ರಪ್ಪಯ್ಯ ಮತ್ತು ಆತನ ಅಣ್ಣ-ತಮ್ಮಂದಿರ ನಡುವೆ ಯಾವುದೇ ನೋಂದಾದ ಪಾಲು ವಿಭಾಗ ಆಗಿರುವುದಿಲ್ಲ. ಕೊಟ್ರಪ್ಪಯ್ಯನ ಮಗಳು ಚನ್ನವೀರಮ್ಮನ ಗಂಡ ಶೇಖರಯ್ಯ. ಶೇಖರಯ್ಯ 2014 ರಲ್ಲಿ ತೀರಿಕೊಂಡಿರುತ್ತಾರೆ. ಶ್ರೀಮತಿ ಚನ್ನವೀರಮ್ಮ 1994 ರಲ್ಲಿ ತೀರಿಕೊಂಡಿರುತ್ತಾರೆ. ಕೊಟ್ರಪ್ಪಯ್ಯನ ಎರಡನೇ ಮಗಳು ಶ್ರೀಮತಿ ಸೌಭಾಗ್ಯಮ್ಮ ಎಂದರೆ ಸರಿ. ಶ್ರೀಮತಿ ಸೌಭಾಗ್ಯಮ್ಮ ಟಿ.ಎಂ.ಗುರುಬಸಯ್ಯನನ್ನು ವಿವಾಹ ಆಗಿರುತ್ತಾರೆ. ಶ್ರೀಮತಿ ಸೌಭಾಗ್ಯಮ್ಮ ಮೊದಲು ತೀರಕೊಂಡರು, ಟಿ.ಎಂ.ಗುರುಬಸಯ್ಯ ನಂತರ ತೀರಿಕೊಂಡರು. ಟಿ.ಎಂ.ಗುರುಬಸಯ್ಯ ಶಿಕ್ಷಕರಾಗಿದ್ದರು. ಟಿ.ಎಂ.ಗುರುಬಸಯ್ಯ ಎಲ್ಲೆಲ್ಲಿ ಸೇವೆ ಸಲ್ಲಿಸಿರುತ್ತಾರೆ ಎಂದರೆ ಹಳ್ಳಿಕೆರೆಯಲ್ಲಿ ಇದ್ದ ಬಗ್ಗೆ ನೆನಪಿದೆ, ಕೂಡ್ಲಿಗಿ ತಾಲೂಕಿನ ಗುಡೇಕೋಟೆಯಲ್ಲಿ ಸಹಾ ಸೇವೆ ಸಲ್ಲಿಸಿರುತ್ತಾರೆ. ಶ್ರೀ ಟಿ.ಎಂ.ಗುರುಬಸಯ್ಯನಿಗೆ ಆರು ಜನ ಅಣ್ಣ-ತಮ್ಮಂದಿರು, ಅವರೆಂದರೆ ಶಂಭುಲಿಂಗಯ್ಯ, ಗುರುಬಸಯ್ಯ, ಚನ್ನಬಸಯ್ಯ, ಪ್ರಭಲಿಂಗಯ್ಯ, ಮೃತ್ಯುಂಜಯ ಮತ್ತು

ಜ್ಞಾನೇಶ್ವರ. ಹೆಣ್ಣುಮಕ್ಕಳು ಗೌರಮ್ಮ, ಗಂಗಮ್ಮ ಮತ್ತು ಕೊಟ್ರಮ್ಮ. ಶ್ರೀಮತಿ ಸೌಭಾಗ್ಯಮ್ಮ 2010 ರಲ್ಲಿ ತೀರಿಕೊಂಡಿರುತ್ತಾರೆ. ಶ್ರೀ ಗುರುಬಸಯ್ಯ ಯಾವಾಗ ತೀರಿಕೊಂಡರು ಗೊತ್ತಿಲ್ಲ. ಆದರೆ ಶ್ರೀಮತಿ ಸೌಭಾಗ್ಯಮ್ಮ ಮೊದಲು ತೀರಿಕೊಂಡಿರುತ್ತಾರೆ. ಶ್ರೀಮತಿ ಸೌಭಾಗ್ಯಮ್ಮನ ಎಲ್ಲಾ ಆಸ್ತಿಗಳು ವಾರಸಾ ನಾತೆಯಿಂದ ಗುರುಬಸಯ್ಯನ ಹೆಸರಿಗೆ ಬಂದಿತು ಎಂದರೆ ಸರಿ.

(ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.